**<u>ದಿನಾಂಕಃ 02.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.</u>**

ಆ ದಿನ ನಾನು ಕನಕಪುರದಿಂದ ಬೆಂಗಳೂರು ರಸ್ತೆಯಲ್ಲಿರುವ ಕಾಲೇಜಿಗೆ ಹೋಗುತ್ತಿದ್ದೆ. ನಾನು ಜೈನ್ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ಮೆಡಿಕಲ್ ಬಿಲ್ಲುಗಳ ಮೊತ್ತವನ್ನು ನಾನು ಮರುಪಾವತಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆಪಾದಿತ ಬಸ್ಸು ನನ್ನ ವಿರುದ್ದ ದಿಕ್ಕಿನಲ್ಲಿ ಬರುತ್ತಿತ್ತು. ಅಪಘಾತವಾಗುವ ಮೊದಲು ನಾನು ಆಪಾದಿತ ಬಸ್ಸನ್ನು ನೋಡಿಲ್ಲ. ಆಪಾದಿತ ಬಸ್ಸು ತಿರುವು ತೆಗೆದುಕೊಳ್ಳುತ್ತಿರುವಾಗ ಅಪಘಾತವಾಗಿರುತ್ತದೆ. ನಾನು ಹೋಗುತ್ತಿದ್ದ ರಸ್ತೆ ನೇರ ರಸ್ತೆ ಆಗಿದ್ದು, ತಿರುವು ಸಹ ಇರುತ್ತದೆ. ನಿಪಿ 5 ಸರಿ ಇರುತ್ತದೆ. ನಿಪಿ 5 ರ ಪ್ರಕಾರ, ನಾನು ಹೋಗುತ್ತಿದ್ದ ಮಾರ್ಗದಲ್ಲಿ ನೇರವಾಗಿ ಹೋದ ನಂತರ ಬಲಕ್ಕೆ ತಿರುವು ಪಡೆದು, ನಂತರ ಎಡಕ್ಕೆ ತಿರುಗಿ ನೇರವಾಗಿ ಹೋಗಬೇಕು ಎಂದರೆ ಸರಿ. ನಾನು ರಸ್ತೆಯ ಬಲಭಾಗಕ್ಕೆ ಬಂದ ಕಾರಣ ಆಪಾದಿತ ಬಸ್ಸಿಗೆ ನಾನೇ ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವೇತನದಲ್ಲಿ ನಷ್ಟ ಉಂಟಾದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ.

ನಿಪಿ 22 ರ ಪ್ರಕಾರ, ವೈದ್ಯಕೀಯ ರಜೆಯನ್ನು ಪಡೆದುಕೊಂಡಿದ್ದು, ಆ ರಜೆಯ ಅವಧಿಯ ಸಂಬಳವನ್ನು ಪಾವತಿಸದೇ ಇರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ರಜೆಯ ಅವಧಿಯಲ್ಲಿ ನನಗೆ ವೇತನವನ್ನು ನೀಡಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನಗೆ ಮೂಳೆ ಮುರಿತ ಉಂಟಾಗಿಲ್ಲ ಎಂದರೆ ಸರಿಯಲ್ಲ. ಅಪಘಾತದ ಪರಿಣಾಮ ನನಗೆ ಯಾವುದೇ ನ್ಯೂನ್ಯತೆ ಉಂಟಾಗಿಲ್ಲ ಮತ್ತು ಕೆಲಸಕ್ಕೆ ತೊಂದರೆಯಾಗಿಲ್ಲ ಎಂದರೆ ಸರಿಯಲ್ಲ.

ಅಪಘಾತ ನನ್ನ ತಪ್ಪಿ ನಿಂದ ಸಂಭವಿಸಿಯೇ ಹೊರತು ಆಪಾದಿತ ವಾಹನದ ಚಾಲಕನ ತಪ್ಪಿ ನಿಂದಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**